# ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 202 ಎಂಡಬ್ಲ್ಯೂಪಿ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 24.02.2020.

## ಸುತ್ತೋಲೆ

**ವಿಷಯ:** 2020–21ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಿ, ಶಾಲೆಗೆ ಹಾಜರಾಗಲು ನಗರ ಸ್ಥಳೀಯ ಸಂಸ್ಥೆಗಳು (ಬಿ.ಬಿ.ಎಂ.ಪಿ. ಒಳಗೊಂಡಂತೆ) ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ.

**ಉಲ್ಲೇಖ:** ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:15768/2013 ರಲ್ಲಿ ದಿನಾಂಕ 18.12.2019 ರಂದು ನೀಡಿದ ಆದೇಶ.

Directorate of Municipal Admin
No
Compilation
28 FEB 2020
HQA / AD Admin
DMA

**********

ಭಾರತ ಸಂವಿಧಾನದ ಕಲಂ 21(ಎ) ಪ್ರಕಾರ 6 ರಿಂದ 14 ವರ್ಷದ ಪ್ರತಿ ಮಗು 8 ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕಾಗಿರುತ್ತದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲು The Karnataka Right of Children to Free and Compulsory Education Rules, 2012 ರನ್ವಯ ಸ್ಥಳೀಯ ಸಂಸ್ಥೆಗಳು ಶಿಕ್ಷಣ ರಿಜಿಸ್ಟರ್‌ನ್ನು ನಿರ್ವಹಿಸಬೇಕಾಗಿರುತ್ತದೆ. The Karnataka Right of Children to Free and Compulsory Education (Amendment) Rules, 2014 ರನ್ವಯ ಮಕ್ಕಳ ಹಾಜರಾತಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ತಿಳಿಸಲಾಗಿದೆ.

ಉಲ್ಲೇಖಿತ ರಿಟ್ ಅರ್ಜಿ ವಿಚಾರಣೆ ಸಂದರ್ಭದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 18.12.2019 ರಂದು ಈ ಕೆಳಕಂಡಂತೆ ಆದೇಶಿಸಿರುತ್ತದೆ.

> "We make it clear the responsibility of carrying out a door-to-door survey shall be of the local authorities and the task cannot be delegated to the teachers in the schools. While carrying out the survey, in case of students who have permanently abandoned the school, the registration number of the students can be of a great help. This aspect shall be borne in mind by the local authorities."

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳು ಹಾಗೂ ಶಾಲೆಗೆ ದಾಖಲಾಗದ ಮಕ್ಕಳ ಬಗ್ಗೆ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣಾ ಪ್ರಕ್ರಿಯೆ ಚಾಲನೆಯಲ್ಲಿರುವುದರಿಂದ ಮಾನ್ಯ ನ್ಯಾಯಾಲಯವು ನೀಡಿರುವ ನಿರ್ದೇಶನದಂತೆ ಶಾಲೆಯಿಂದ ಹೊರಗುಳಿದ ಮಕ್ಕಳ ನಿಖರ ಸಂಖ್ಯೆಯನ್ನು ಗುರುತಿಸುವುದು ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆಯನ್ನು **ದಿನಾಂಕ: 01.05.2020** ರಿಂದ

495

31.05.2020 ರವರೆಗೆ ನಡೆಸಲು ತೀರ್ಮಾನಿಸಿದೆ. ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ (ಬಿ.ಬಿ.ಎಂ.ಪಿ. ಒಳಗೊಂಡಂತೆ) ಕೈಗೊಳ್ಳಬೇಕಾದ ಕಾರ್ಯಚಟುವಟಿಕೆಗಳ ಬಗ್ಗೆ ಈ ಕೆಳಗಿನಂತೆ ಕ್ರಮಗಳನ್ನು ಅನುಸರಿಸುವುದು.

**ಹಂತ-1:- ಶಾಲೆಗೆ ದಾಖಲಾಗದಿರುವ ಮಕ್ಕಳನ್ನು ಗುರುತಿಸುವುದು. (Never Enrolled)**

1. ನ್ಯಾಯಾಲಯದ ನಿರ್ದೇಶನದಂತೆ ಶಾಲೆಗೆ ದಾಖಲಾಗದ ಮಕ್ಕಳ ಮಾಹಿತಿಯನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ಸೂಚಿಸಲಾಗಿದೆ. ಇದರಲ್ಲಿ 6 ರಿಂದ 14 ವಯೋಮಾನದ ಮಕ್ಕಳ ಮಾಹಿತಿಯನ್ನು ಒಳಗೊಂಡಿರುವುದು. ಈ ಮಕ್ಕಳ ಮಾಹಿತಿಯನ್ನು ಸಂಗ್ರಹಿಸುವ ಪೂರ್ವದಲ್ಲಿ ಅಂಗನವಾಡಿ ಕೇಂದ್ರಗಳಲ್ಲಿರುವ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
2. ಸಮೀಕ್ಷೆಯ ಸಮಯದಲ್ಲಿ ವಲಸೆ ಹೋಗಿದ್ದ ಮಕ್ಕಳು, ಕೆಲವು ದಿನಗಳಲ್ಲಿ ವಾಪಸ್ಸು ಬರುವ ಸಂಭವವಿದ್ದಲ್ಲಿ, ಅಂತಹ ಮಕ್ಕಳನ್ನು ಗಣತಿಯ ಸ್ಥಳದಲ್ಲಿ ಪರಿಗಣಿಸಬೇಕು. ಬೇರೆ ಜಿಲ್ಲೆ/ತಾಲ್ಲೂಕುಗಳಲ್ಲಿ ಒಟ್ಟು ಇರುವ ವಲಸೆ ಮಕ್ಕಳ ಪಟ್ಟಿಯನ್ನು ಪರಸ್ಪರ ಪರಿಶೀಲಿಸಿ, ವಿನಿಮಯ ಮಾಡಿಕೊಂಡು, ಎರಡೂ ಕಡೆ ಮಕ್ಕಳ ಹೆಸರು ಮನರಾವರ್ತನೆಯಾಗದಂತೆ ಖಚಿತಪಡಿಸಿಕೊಳ್ಳತಕ್ಕದ್ದು. ಇದು ಅತಿ ಮುಖ್ಯವಾದ ಕಾರ್ಯವಾಗಿದೆ.
3. ಸಮೀಕ್ಷೆಯಲ್ಲಿ ಮಕ್ಕಳ ಮನೆಗಳಿಗೆ ಭೇಟಿ ನೀಡಿ, ಶಾಲೆಯಿಂದ ಹೊರಗೆ ಉಳಿದಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
4. ಶಾಲೆ ಬಿಟ್ಟ ಮಕ್ಕಳು ಹಾಗೂ ಶಾಲೆಗೆ ಸೇರದ ಮಕ್ಕಳ ಮಾಹಿತಿಯನ್ನು WER (Ward Education Register) ನಲ್ಲಿ ನಿರ್ವಹಿಸುವುದು.

**ಹಂತ : 2: ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ವಿಶೇಷವಾಗಿ ಗಮನಿಸಬೇಕಾದ ಸ್ಥಳಗಳು:-**

1. ಸಮೀಕ್ಷೆ ಅಲ್ಲದೇ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಜನ ವಸತಿ ಪ್ರದೇಶಗಳಲ್ಲಿ ರಹಿತವಾಗಿರುವ ಕೈಗಾರಿಕಾ ಸ್ಥಳಗಳು, ಕೃಷಿ ಕಾರ್ಮಿಕ ವಲಯಗಳು, ಕೊಳಗೇರಿಗಳು (ಸ್ಲಂ), ಬಸ್ ಮತ್ತು ರೈಲು ನಿಲ್ದಾಣ, ಧಾರ್ಮಿಕ ಕೇಂದ್ರಗಳು, ಅನಾಥಾಶ್ರಮ, ಬಂದಿಖಾನೆಗಳು, ಕಟ್ಟಡ ಕಾಮಗಾರಿ ನಡೆಯುವ ಸ್ಥಳಗಳು, ಆಸ್ಪತ್ರೆ, ಹೋಟೇಲ್, ಛತ್ರಗಳು, ಚಿತ್ರಮಂದಿರಗಳು, ಸಣ್ಣ ಕಾರ್ಖಾನೆಗಳು, ಇಟ್ಟಿಗೆ ತಯಾರಿಸುವ ಸ್ಥಳ, ಮಂಡಕ್ಕಿ ಭಟ್ಟಿಗಳು, ಹಾಗೂ ಇತರೆ ಸ್ಥಳಗಳಲ್ಲಿ ಶಾಲೆಗಳಿಂದ ಹೊರಗುಳಿದ ಮಕ್ಕಳು ಸಿಗುವುದರಿಂದ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ (ಬಿ.ಬಿ.ಎಂ.ಪಿ. ಒಳಗೊಂಡಂತೆ) ಮೇಲ್ಕಾಣಿಸಿದ ಸ್ಥಳಗಳನ್ನು ಮುಂಚಿತವಾಗಿ ಗುರುತಿಸಿಕೊಂಡು ಗಣತಿ ಕಾರ್ಯ ಕೈಗೊಳ್ಳಬೇಕು.

2. **ಕ್ರೋಢೀಕರಣ ಕಾರ್ಯಕ್ರಮದ ವೇಳಾಪಟ್ಟಿ:**

| ಕ್ರ.ಸಂ. | ಕಾರ್ಯಕ್ರಮದ ವಿವರ | ದಿನಾಂಕ |
|---|---|---|
| 1. | ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯ (ಬಿ.ಬಿ.ಎಂ.ಪಿ. ಒಳಗೊಂಡಂತೆ) ಶಾಲೆಬಿಟ್ಟ ಮತ್ತು ಶಾಲೆಗೆ ದಾಖಲಾಗದ ಮಕ್ಕಳ ಮಾಹಿತಿಯನ್ನು ಕ್ರೂಢೀಕರಿಸುವುದು | 15.05.2020 ರೊಳಗೆ |
| 2. | ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ (ಬಿ.ಬಿ.ಎಂ.ಪಿ. ಒಳಗೊಂಡಂತೆ) ಶಾಲೆಯಿಂದ ಹೊರಗುಳಿದ ಮಕ್ಕಳ ಅಂಕಿ-ಅಂಶ ಮಾಹಿತಿಯನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿ ಕ್ರೂಢೀಕರಿಸುವುದು. | 20.05.2020 ರೊಳಗೆ |

| | | |
|---|---|---|
| 3. | ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸಂಬಂಧಿಸಿದಂತೆ ಬಿ.ಬಿ.ಎಂ.ಪಿ. ಆಯುಕ್ತರ ಮಟ್ಟದಲ್ಲಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ (ಬಿ.ಬಿ.ಎಂ.ಪಿ. ಹೊರತುಪಡಿಸಿ) ವ್ಯಾಪ್ತಿಗೆ ಸಂಬಂಧಿಸಿದಂತೆ ಪೌರಾಡಳಿತ ನಿರ್ದೇಶನಾಲಯದ ಮಟ್ಟದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಅಂಕಿ–ಅಂಶವನ್ನು ಅಂತಿಮವಾಗಿ ನಿಖರಗೊಳಿಸುವುದು. | 31.05.2020 ರೊಳಗೆ |

**ಹಂತ – 3: ಶಾಲೆಯಿಂದ ಹೊರಗುಳಿದ ಮಕ್ಕಳ ಪಟ್ಟಿಯ ಪ್ರಕಟಣೆ, ಎನ್.ಜಿ.ಒ. ಗಳೊಂದಿಗೆ ಚರ್ಚಿಸಿ ಮತ್ತು ವಿನಿಮಯ ಮಾಹಿತಿ ಅಂತಿಮಗೊಳಿಸುವುದು.**

ಹಂತ–1ರ ಸಮೀಕ್ಷೆ ಹಾಗೂ ಹಂತ–2ರ ವಿಶೇಷವಾದ ಸ್ಥಳಗಳ ಸಮೀಕ್ಷೆಯ ಆಧಾರದಲ್ಲಿ 'ಕ್ರೋಢಿಕರಿಸಿದ ಮಾಹಿತಿಯನ್ನು ದಿನಾಂಕ 20.05.2020 ರ ಸಂಜೆ 5.30 ರೊಳಗೆ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ನಗರ ಸ್ಥಳೀಯ ಸಂಸ್ಥೆ ಕಛೇರಿಯಲ್ಲಿ (ಬಿ.ಬಿ.ಎಂ.ಪಿ. ಒಳಗೊಂಡಂತೆ) ಶಾಲೆಯಿಂದ ಹೊರಗುಳಿದ ಮಕ್ಕಳ ಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಬೇಕು. ಪ್ರಕಟಣೆ ಮಾಹಿತಿಯ ಕುರಿತು ದಾಖಲೆಗಳನ್ನು ನಿರ್ವಹಿಸಿ ಸಂರಕ್ಷಿಸುವುದು. ನಂತರ ಜಿಲ್ಲೆಯಲ್ಲಿರುವ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಯವರೊಂದಿಗೆ ದಿನಾಂಕ 25.05.2020 ರಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ ನಡೆಸುವುದು.

ಸದರಿ ಪಟ್ಟಿಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಾಂಕ: 31.05.2020 ರೊಳಗೆ ಆಯಾ ಎನ್.ಜಿ.ಓ. ಗಳೊಂದಿಗೆ ಕ್ಷೇತ್ರ ಭೇಟಿ ಮಾಡಿ ನಿಖರವಾಗಿ ಪತ್ತೆಯಾದ ಮಕ್ಕಳ ಮಾಹಿತಿಯನ್ನು ಅಂತಿಮಗೊಳಿಸಬೇಕು. ಹೀಗೆ ಅಂತಿಮಗೊಂಡ ಶಾಲೆ ಬಿಟ್ಟ ಮತ್ತು ಶಾಲೆಗೆ ದಾಖಲಾಗದ ಮಕ್ಕಳ ಒಟ್ಟು ಸಂಖ್ಯೆಯು ಜಿಲ್ಲೆಯ 2020–21ನೇ ಸಾಲಿಗೆ ಮುಖ್ಯವಾಹಿನಿಗೆ ತರಬೇಕಾದ ಗುರಿ ಆಗಿರುತ್ತದೆ.

- ನಮೂನೆಗಳನ್ನು ಭರ್ತಿ ಮಾಡುವಾಗ ಜಾತಿ, ಲಿಂಗ ಹಾಗೂ ಶಾಲೆಗೆ ಸೇರದಿರಲು ಕಾರಣ, ವಿಕಲಚೇತನ ಮಕ್ಕಳು ಮತ್ತು ವಿಶೇಷವಾಗಿ ಗಮನಿಸಬೇಕಾದ ಮಕ್ಕಳಿರುವುದಕ್ಕೆ ಸಂಕೇತ (ಕೋಡ್) ಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

**ವಿಶೇಷ ಸೂಚನೆ:–**

1. ಸಮೀಕ್ಷೆ ಪ್ರಾರಂಭಕ್ಕೆ ಒಂದು ವಾರ ಮುಂಚಿತವಾಗಿ ಸಮುದಾಯ ಹಾಗೂ ಸಾರ್ವಜನಿಕರ ಗಮನಕ್ಕೆ ಬರುವಂತೆ ಪ್ರಚಾರ ಕಾರ್ಯ ಕೈಗೊಳ್ಳಬೇಕು. ಸಮೀಕ್ಷೆ ನಡೆಸುತ್ತಿರುವ ಉದ್ದೇಶ ಮತ್ತು ಮಹತ್ವವನ್ನು ಎಸ್.ಡಿ.ಎಂ.ಸಿ. ಪೋಷಕರು ಹಾಗೂ ಸ್ಥಳೀಯ ಜನಪ್ರನಿಧಿಗಳಿಗೆ ಮನವರಿಕೆ ಮಾಡಿಕೊಡುವುದು ಹಾಗೂ ಸಮೀಕ್ಷೆ ಕಾರ್ಯದಲ್ಲಿ ಭಾಗವಹಿಸುವಂತೆ ವಿನಂತಿಸುವುದು.
2. ಕೊಳಚೆ ಪ್ರದೇಶಗಳಲ್ಲಿ ಸಮೀಕ್ಷೆಯನ್ನು ಕೊಳಚೆ ನಿರ್ಮೂಲನಾ ಮಂಡಳಿ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆಸಕ್ತಿವುಳ್ಳ ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳ ಸಹಕಾರದೊಂದಿಗೆ ಕೈಗೊಳ್ಳುವುದು. ಸದರಿ ಸಮೀಕ್ಷಾ ಕಾರ್ಯಕ್ಕೆ ಸ್ತ್ರೀಶಕ್ತಿ ಸಂಘ ಮತ್ತು ಯುವಶಕ್ತಿ ಸಂಘಗಳ ಸಹಕಾರ ಪಡೆಯುವುದು.
3. ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳಲ್ಲಿ ವಿಶೇಷ ಗಮನಹರಿಸಿ ಸಮೀಕ್ಷೆ ಮಾಡುವುದು.

494

4. ಈ ಗಣತಿ ಪ್ರಕ್ರಿಯೆಯಲ್ಲಿ ಸ್ಥಳೀಯವಾಗಿ ಶಾಲೆಯಿಂದ ಹೊರಗುಳಿದ ಮಕ್ಕಳ ಚಟುವಟಿಕೆಗಳ ಅನುಷ್ಠಾನದಲ್ಲಿ ತೊಡಗಿಕೊಂಡಿರುವ ಹಾಗೂ ಸ್ವಯಂ ಪ್ರೇರಿತವಾಗಿ ಸಮಾಜ ಸೇವೆ ಮನೋಭಾವವುಳ್ಳ ಎನ್.ಜಿ.ಓ.ಗಳ ಸೇವೆಯನ್ನು ಬಳಸಿಕೊಳ್ಳುವುದು.
5. ಶಾಲೆಯಿಂದ ಹೊರಗುಳಿದ ಮಕ್ಕಳು (7+ ವಯೋಮಾನ) ಕಂಡು ಬರುವ ಪ್ರದೇಶಗಳಲ್ಲಿ ಎಚ್ಚರಿಕೆಯಿಂದ ನಿಖರತೆಯನ್ನು ಸಾಧಿಸುವ ನಿಟ್ಟಿನಲ್ಲಿ ಎಲ್ಲಾ ಸ್ತರದ ಅಧಿಕಾರಿಗಳು ಸಕ್ರಿಯವಾಗಿ ಪಾಲ್ಗೊಂಡು ಮಾಹಿತಿಯನ್ನು ಸಂಗ್ರಹಿಸುವುದು.

ಪ್ರಕರಣವು ಉಚ್ಚ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದ್ದು, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ತರಲು ನಿಖರವಾದ ಕ್ರಮಗಳನ್ನು ಸರ್ಕಾರದ ವತಿಯಿಂದ ಕೈಗೊಂಡು ಮಾನ್ಯ ನ್ಯಾಯಾಲಯಕ್ಕೆ ಅನುಪಾಲನಾ ವರದಿ ಸಲ್ಲಿಸಬೇಕಾಗಿರುತ್ತದೆ.

ಮೇಲ್ಕಂಡ ಆದೇಶದ ಹಿನ್ನೆಲೆಯಲ್ಲಿ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸಲು ನಿರಂತರವಾದ ಕ್ರಮಕೈಗೊಳ್ಳುವುದು ಅವಶ್ಯವಾಗಿದೆ. ಈ ಕಾರ್ಯದಲ್ಲಿ ಮಾನ್ಯ ನ್ಯಾಯಾಲಯವು ಆದೇಶಿಸಿರುವಂತೆ ನಗರ ಸ್ಥಳೀಯ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸಬೇಕಾಗಿರುತ್ತದೆ. ಈ ದಿಸೆಯಲ್ಲಿ ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ನಿರಂತರವಾದ ಕಾರ್ಯ ಯೋಜನೆಯನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

- ನಗರ ಸ್ಥಳೀಯ ಸಂಸ್ಥೆಗಳು (ಬಿ.ಬಿ.ಎಂ.ಪಿ. ಒಳಗೊಂಡಂತೆ) ಆರ್.ಟಿ.ಇ. ಕಾಯ್ದೆಯಂತೆ ಶಾಲೆಯಿಂದ ಹೊರ ಉಳಿದ ಮಕ್ಕಳ ಬಗ್ಗೆ ಮಕ್ಕಳ ಕಲ್ಯಾಣ ಅಧಿಕಾರಿಗಳು, ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಎನ್.ಜಿ.ಓ.ಗಳೊಂದಿಗೆ ಸಮಾಲೋಚಿಸಿ ನಿಗಧಿತ ಅವಧಿಯೊಳಗಾಗಿ ಎನ್.ಜಿ.ಓ.ಗಳ ಸಹಕಾರದೊಂದಿಗೆ ಸಿಬ್ಬಂದಿಯನ್ನು ನಿಯೋಜಿಸಿ ಸರ್ವೆ ಕಾರ್ಯ ಕೈಗೊಳ್ಳಲು ಮಾರ್ಗದರ್ಶಿಗಳನ್ನು ಮತ್ತು ವಾರ್ಷಿಕ ನಿರ್ವಹಣೆಯ ಕಾರ್ಯಕ್ರಮ ರೂಪಿಸುವುದು.
- ಸರ್ವೆ ಕಾರ್ಯವನ್ನು ಪ್ರತಿ ವರ್ಷದ ಮೇ ತಿಂಗಳೊಳಗಾಗಿ ಪೂರ್ಣಗೊಳಿಸುವುದು ಹಾಗೂ ವಾರ್ಷಿಕ ಸರ್ವೆ ಕಾರ್ಯ 3 ತಿಂಗಳಿಗೊಮ್ಮೆ ಇಂದೀಕರಿಸುವುದು ಹಾಗೂ ಶಾಲೆಯಿಂದ ವಂಚಿತರಾದ ಮಕ್ಕಳನ್ನು ಪುನಃ ಶಾಲೆಗೆ ದಾಖಲಿಸಲು ಸಂಬಂಧಿಸಿದ ಇಲಾಖೆಯೊಂದಿಗೆ ಸಹಕರಿಸಲು ಕ್ರಮವಹಿಸುವುದು.
- ಪ್ರತಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬಿ.ಬಿ.ಎಂ.ಪಿ. ಒಳಗೊಂಡಂತೆ) ಕರ ವಸೂಲಿಗಾರರನ್ನು ವಾರ್ಡ್ ಮಟ್ಟದ ಅಧಿಕಾರಿಯನ್ನಾಗಿ ನೇಮಿಸಿ ಮಾಹಿತಿಯ ಸಂಗ್ರಹಣೆ ಮಾಡುವುದು ಹಾಗೂ ನಗರ ಸ್ಥಳೀಯ ಸಂಸ್ಥೆಯ ಎಲ್ಲಾ ವಾರ್ಡಗಳ ಕ್ರೋಢಿಕೃತ ಮಾಹಿತಿಯನ್ನು ನಿರ್ವಹಿಸಲು ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸುವುದು.
- ನಗರ ಸ್ಥಳೀಯ ಸಂಸ್ಥೆಯ ಮಟ್ಟದಲ್ಲಿ (ಬಿ.ಬಿ.ಎಂ.ಪಿ. ಒಳಗೊಂಡಂತೆ) ಇರುವ ಸ್ಥಾಯಿ ಸಮಿತಿಗೆ ಇದರ ಉಸ್ತುವಾರಿಯನ್ನು ವಹಿಸುವುದು.
- ನಗರ ಸ್ಥಳೀಯ ಸಂಸ್ಥೆಯ (ಬಿ.ಬಿ.ಎಂ.ಪಿ. ಒಳಗೊಂಡಂತೆ) ವಾರ್ಡ್‌ನ ಸದಸ್ಯರನ್ನು ಅದರ ಅಧ್ಯಕ್ಷರನಾಗಿಸಿ ವಾರ್ಡ ಕಮಿಟಿಯನ್ನು ರಚಿಸತಕ್ಕದ್ದು. ಆ ವಾರ್ಡ್ ವ್ಯಾಪ್ತಿಯ ಮುಖ್ಯೋಪಧ್ಯಾಯರು, ಅಂಗನವಾಡಿ ಕಾರ್ಯಕರ್ತರು, ಎನ್.ಜಿ.ಓ. ಗಳನ್ನು ಸದಸ್ಯರನಾಗಿ ಮಾಡಿಕೊಂಡು ಕಾಲಕಾಲಕ್ಕೆ ಸದರಿ ಸಮಿತಿಯು ಕಾಲಕಾಲಕ್ಕೆ ತಪಾಸಣೆ ನಡೆಸಿ ಶಾಲೆಯಿಂದ

ವಂಚಿತರಾದ ಹಾಗೂ ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ, ಬಸ್ ನಿಲ್ದಾಣ, ರೈಲ್ವೇ ನಿಲ್ದಾಣ, ಕಾರ್ಖಾನೆಗಳು, ಮಾರುಕಟ್ಟೆ ಮುಂತಾದ ಸ್ಥಳಗಳಲ್ಲಿ ಮಕ್ಕಳನ್ನು ಗುರುತಿಸಿ, ಸಂಬಂಧಿಸಿದ ಇಲಾಖೆಗಳಾದ ಮಕ್ಕಳ ಕಲ್ಯಾಣಾಧಿಕಾರಿ (CDPO), ಕಾರ್ಮಿಕ ಇಲಾಖೆ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ತಿಳಿಸುವ ಬಗ್ಗೆ ಕ್ರಮವಹಿಸುವುದು.

- ನಗರ ಸ್ಥಳೀಯ ಸಂಸ್ಥೆಗಳ (ಬಿ.ಬಿ.ಎಂ.ಪಿ. ಒಳಗೊಂಡಂತೆ) ಆಯವ್ಯಯದಲ್ಲಿ ತಮ್ಮ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಅವಕಾಶ ಮಾಡುವುದು.
- ಶಿಕ್ಷಣ ಹಕ್ಕು ಕಾಯ್ದೆಯಡಿಯ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಆಯಾ ಜಿಲ್ಲೆಯ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರುಗಳನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದೆ. ಬಿ.ಬಿ.ಎಂ.ಪಿ.ಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಹೆಚ್ಚುವರಿ / ಜಂಟಿ / ಉಪ ಆಯುಕ್ತರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದೆ. ಇವರು ತಮ್ಮ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಯ (ಬಿ.ಬಿ.ಎಂ.ಪಿ. ಒಳಗೊಂಡಂತೆ) ಪ್ರಗತಿಯನ್ನು ಪರಿಶೀಲಿಸುವುದು ಮತ್ತು ಸಂದರ್ಭ ಅನುಸಾರ ಸಂಬಂಧಪಟ್ಟ ಅಧಿಕಾರಿ ಸಿಬ್ಬಂದಿಗಳಿಗೆ ನಿರ್ದೇಶನ ನೀಡಲು ಕ್ರಮವಹಿಸಲು ನಿರ್ದೇಶಿಸಲಾಗಿದೆ. ಇವರು ಪ್ರತಿ ಮಾಹೆಯ ಪ್ರಗತಿ ಪರಿಶೀಲನ ಸಭೆಯಲ್ಲಿ ಈ ವಿಷಯದ ಪ್ರಗತಿಯನ್ನು ಚರ್ಚಿಸತಕ್ಕದ್ದು.
- ನಗರ ಸ್ಥಳೀಯ ಸಂಸ್ಥೆಗಳ (ಬಿ.ಬಿ.ಎಂ.ಪಿ. ಒಳಗೊಂಡಂತೆ) ಮಕ್ಕಳ ವಿವರದ ದಾಖಲೆಗಳನ್ನು WER (Ward Education Register) format ನಲ್ಲಿ ನಿರ್ವಹಿಸುವುದು. ಇದನ್ನು ಪ್ರತಿ 3 ತಿಂಗಳಿಗೊಮ್ಮೆ (ಪ್ರತಿ ಜೂನ್ 30, ಸೆಪ್ಟೆಂಬರ್ 30, ಡಿಸೆಂಬರ್ 31, ಮಾರ್ಚ್ 31ರ ಅಂತ್ಯಕ್ಕೆ) ಇಂದೀಕರಿಸುವುದು.

ಮೇಲೆ ವಿವರಿಸಿರುವಂತೆ, ಕ್ರಮಕೈಗೊಂಡು, ಭಾರತ ಸಂವಿಧಾನ, The Right of Children to Free and Compulsory Education Act, 2009, The Karnataka Right of Children to Free and Compulsory Education Rules, 2012 ಮತ್ತು ಮೇಲೆ ತಿಳಿಸಿದ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡುವ ಮೂಲಕ ಮಕ್ಕಳ ಶಿಕ್ಷಣದ ಹಕ್ಕನ್ನು ಜಾರಿಗೊಳಿಸಲು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು (ಬಿ.ಬಿ.ಎಂ.ಪಿ. ಒಳಗೊಂಡಂತೆ) ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ನಿರ್ದೇಶನ ನೀಡಲಾಗಿದೆ.

ನಿಗದಿತ ಅವಧಿಯಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸದ ಅಧಿಕಾರಿ / ಸಿಬ್ಬಂದಿಗಳ ಮೇಲೆ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುವುದು.

(ರಾಕೇಶ್ ಸಿಂಗ್ ಭಾ.ಆ.ಸೇ.)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

**ಇವರಿಗೆ:**

1. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.

493

2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಯವರ ಕಾರ್ಯಾಲಯ.
4. ರಾಜ್ಯದ ಎಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ.
5. ರಾಜ್ಯದ ಎಲ್ಲಾ ಆಯುಕ್ತರು, ಮಹಾನಗರಪಾಲಿಕೆ.
6. ರಾಜ್ಯದ ಎಲ್ಲಾ ಪೌರಾಯುಕ್ತರು / ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತಿ / ಪುರಸಭೆ / ನಗರಸಭೆ. (3, 4, 5, 6 ಇಮೇಲ್ ಮುಖಾಂತರ)

<u>ಪ್ರತಿ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ:</u>

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6) ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು.
7) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

# ಅನುಬಂಧ-1

ಸಮಗ್ರ ಶಿಕ್ಷಣ ಕರ್ನಾಟಕ
ಶಾಲೆಗೆ ದಾಖಲಾಗದ / ಶಾಲೆ ಬಿಟ್ಟ ಮಕ್ಕಳ ಸಮೀಕ್ಷೆ
________ ನಗರ ಸ್ಥಳೀಯ ಸಂಸ್ಥೆ

ನಮೂನೆ – 1

ಸಮೀಕ್ಷೆದಾರರ ಹೆಸರು: ವಿಳಾಸ:

**ಮಗುವಿನ ಮಾಹಿತಿ**

| ಕ್ರ.ಸಂ. | ವಿವರ | ಮಾಹಿತಿ |
|---|---|---|
| 1. | ಮಗುವಿನ ಹೆಸರು | |
| 2. | ತಂದೆಯ ಹೆಸರು | |
| 3. | ತಾಯಿಯ ಹೆಸರು | |
| 4. | ಪೋಷಕರ ಹೆಸರು | |
| 5. | ಹುಟ್ಟಿದ ದಿನಾಂಕ | |
| 6. | ಲಿಂಗ (ಗಂಡು/ಹೆಣ್ಣು) | |
| 7. | ಜಾತಿ (ಅನುಬಂಧ (ಎ)ನಲ್ಲಿ ನೀಡಿರುವ ಸಂಕೇತ ನಮೂದಿಸಿ) | |
| 8. | ಧರ್ಮ (ಅನುಬಂಧ (ಎ) ನಲ್ಲಿ ನೀಡಿರುವ ಸಂಕೇತ ನಮೂದಿಸಿ) | |
| 9. | ವಿಶೇಷ ಅಂಗವಿಕಲತೆ (ಅನುಬಂಧ (ಬಿ)ನಲ್ಲಿ ನೀಡಿರುವ ಸಂಕೇತ ನಮೂದಿಸಿ) | |
| 10. | ಮಗುವಿನ ಶೈಕ್ಷಣಿಕ ಸ್ಥಿತಿ (ಶಾಲೆಗೆ ದಾಖಲಾಗದ ಮಗು / ಶಾಲೆ ಬಿಟ್ಟ ಮಗು) | |
| 11. | ಶಿಕ್ಷಣ ವಂಚಿತ ನಗರ ಪ್ರದೇಶದ ಮಗುವೇ? (UDC) (ಹೌದು/ಇಲ್ಲ) | |
| 12. | ವಲಸಿತ ಮಗುವೇ? ಹೌದು ( ) ಇಲ್ಲ ( ) | |
| 13. | ವಲಸೆ ಬಂದ ಪ್ರದೇಶ (ರಾಜ್ಯದ ಹೊರಗೆ / ಒಳಗೆ) | |
| 14. | ಶಾಲೆ ಬಿಟ್ಟಾಗ ಮಗು ಓದುತ್ತಿದ್ದ ತರಗತಿ | |
| 15. | ಮಗು ಶಾಲೆ ಬಿಡಲು ಕಾರಣ (ಅನುಬಂಧ (ಸಿ) ನಲ್ಲಿ ನೀಡಿರುವ ಸಂಕೇತ ನಮೂದಿಸಿ) | |
| 16. | ಮಗು ಶಾಲೆ ಬಿಟ್ಟಾಗ ಓದುತ್ತಿದ್ದ ಶಾಲೆಯ ಹೆಸರು | |
| 17. | ಮಾತೃಭಾಷೆ | |
| 18. | ರೇಷನ್ ಕಾರ್ಡ್ ಸಂಖ್ಯೆ (ಲಭ್ಯವಿದ್ದಲ್ಲಿ) | |
| 19. | ಹಾಲಿ ವಾಸ ಮಾಡುತ್ತಿರುವ ಮಗುವಿನ ವಿಳಾಸ | ಜಿಲ್ಲೆ-----------ಬ್ಲಾಕ್-------<br>ಗ್ರಾಮ---------ಜನವಸತಿ ಪ್ರದೇಶ-<br>----ಪಿನ್‌ಕೋಡ್------- |
| 20. | ಹೊರ ರಾಜ್ಯದಿಂದ ವಲಸೆ ಬಂದ ಮಗುವೇ?<br>ಹೌದು ( ) ಇಲ್ಲ ( ) | ರಾಜ್ಯ -----ಜಿಲ್ಲೆ-----------<br>ಬ್ಲಾಕ್------ಗ್ರಾಮ--------<br>ಜನವಸತಿ ಪ್ರದೇಶ-----<br>ಪಿನ್‌ಕೋಡ್------ |
| 21. | ಪೋಷಕರ ಮೊಬೈಲ್ ಸಂಖ್ಯೆ | |

492

ಸಮೀಕ್ಷೆದಾರರ ಸಹಿ

ಶಾಲೆ ಬಿಟ್ಟ ಮಗುವಿನ ಜಾತಿ / ಧರ್ಮ

| ಜಾತಿ | ಕೋಡ್ |
|---|---|
| ಪರಿಶಿಷ್ಟ ಜಾತಿ (SC) | 1 |
| ಪರಿಶಿಷ್ಟ ಪಂಗಡ (ST) | 2 |
| ಪ್ರವರ್ಗ (ಅ-1) | 3 |
| ಇತರೆ ಹಿಂದುಳಿದ ವರ್ಗ (OBC) (ಮುಸ್ಲಿಂ ಇತರೆ ಅಲ್ಪಸಂಖ್ಯಾತರನ್ನು ಹೊರತುಪಡಿಸಿ) | 4 |
| ಮುಸ್ಲಿಂ (Muslim) | 5 |
| ಇತರೆ ಅಲ್ಪಸಂಖ್ಯಾತರು (Other Minorities) ಕ್ರೈಸ್ತ್-6ಎ, ಬೌದ್ಧ-6ಬಿ, ಜೈನ್-6ಸಿ, ಸಿಖ್-6ಡಿ, ಪಾರ್ಸಿ-6ಇ | 6 |
| ಇತರೆ (Others) | 7 |

9

ವಿಕಲಚೇತನದ ವಿಧಗಳು

| ದೋಷಗಳು | ಕೋಡ್ |
|---|---|
| ಬುದ್ಧಿಮಾಂದ್ಯತೆ (MR) | 1 |
| ಭಾಗಶಃ ದೃಷ್ಟಿದೋಷ (LV) | 2 |
| ಪೂರ್ಣ ದೃಷ್ಟಿದೋಷ (TB) | 3 |
| ಶ್ರವಣನ್ಯೂನ್ಯತೆ (HI) | 4 |
| ಮಾತನಾಡುವ ವಿಕಲತೆ (SI) | 5 |
| ಅಂಗವಿಕಲತೆ (PH) | 6 |
| ಬಹುವಿಕಲತೆ (MD) | 7 |
| ಕಲಿಕಾ ನ್ಯೂನತೆ (LD) | 8 |
| ಸೆರೆಬ್ರಲ್ ಪಾಲ್ಸಿ (CP) | 9 |
| ಆಟಿಸಂ ಸ್ಪೆಕ್ಟ್ರಂ ಡಿಸಾರ್ಡರ್ (ASD) | 10 |

## ಶಾಲೆಯಿಂದ ಹೊರಗುಳಿಯಲು ಕಾರಣಗಳು

| ಕಾರಣ | ಕೋಡ್ |
|---|---|
| ಶಾಲೆ/ದೂರವಿರುವುದು (School at far distance) | 1 |
| ಸ್ವಂತ ಮನೆಗೆಲಸ (House hold work) | 2 |
| ಬೇರೆಯವರ ಮನೆಗೆಲಸ (Work in other house hold) | 3 |
| ಇತರೆ ದುಡಿಮೆ ಕೆಲಸದಲ್ಲಿ ತೊಡಗಿರುವುದು (Engaged other earning) | 4 |
| ಮದುವೆಯಾಗಿರುವುದು (Married) | 5 |
| ಹೆಣ್ಣುಮಗು ಪ್ರೌಢಾವಸ್ಥೆಗೆ ಬರುವುದು (Puberty) | 6 |
| ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಕಾರಣ (Reasons related to girl child) | 7 |
| ಶಾಲಾ ಪರಿಸರ ಆಕರ್ಷಣೀಯವಾಗಿಲ್ಲದಿರುವುದು (Un attractive school environment) | 8 |
| ವಲಸೆ ಜೀವನ (Migration) | 9 |
| ಶಿಕ್ಷಕರ ಭಯ (Teacher's fear) | 10 |
| ಓಡಿ ಹೋದ ಮಗು (Run away child) | 11 |
| ಬೀದಿ ಮಗು/ಚಿಂದಿ ಆಯುವ ಮಗು (Street / Rag picking child) | 12 |
| ತೀವ್ರ ಅಂಗವಿಕಲತೆ (Severe physical disability) | 13 |
| ಮರಣ ಹೊಂದಿರುವುದು (Death) | 14 |
| ಬಾಲ ಕಾರ್ಮಿಕರಾಗಿರುವುದು (Child labour) | 15 |
| ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದು (Sibling care) | 16 |
| ಪೋಷಕರ ನಿರಾಸಕ್ತಿ (Parents disinterest) | 17 |
| ಮಕ್ಕಳ ನಿರಾಸಕ್ತಿ (Children`s disinterest) | 18 |
| ಮಕ್ಕಳ ಅನಾರೋಗ್ಯ (ill health) | 19 |
| ಕೌಟಂಬಿಕ ಸಮಸ್ಯೆ (Family dispute) | 20 |
| ಅಲೆಮಾರಿ (Nomad) | 21 |
| ಅನಾಥ ಮಗು (Orphan child) | 22 |
| ಹೆಚ್.ಐ.ವಿ./ಏಡ್ಸ್/ಕುಷ್ಟರೋಗ ಪೀಡಿತ ಮಗು (HIV/AIDS/Leprosy affected child) | 23 |
| ಕಾನೂನು ಸಂಘರ್ಷಕ್ಕೆ ಒಳಪಟ್ಟ ಮಕ್ಕಳು (Juvenile Delinquent) | 24 |